# ದೀವಟಿಗೆಯ ಬೆಳಕು

ಗುರು ನಾಯಕನಹಟ್ಟಿ ತಿಪ್ಪೇಸ್ವಾಮಿ, ಮಧ್ಯಕರ್ನಾಟಕದ ಪ್ರಸಿದ್ಧ ಅವಧೂತರಲ್ಲಿ ಮೊದಲ ಹೆಸರು. ಜನಸಾಮಾನ್ಯರ ಬಾಯಲ್ಲಿ ಹಟ್ಟಿ ತಿಪ್ಪಯ್ಯ, ತಿಪ್ಪೇಸ್ವಾಮಿ ಎಂತಲೂ ಇವರ ಹೆಸರು ಹೆಚ್ಚು ಪ್ರಸಿದ್ಧವಾಗಿದೆ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಗೆ ಸಮೀಪದಲ್ಲಿರುವ ನಾಯಕನಹಟ್ಟಿಯಲ್ಲಿ ಗುರು ತಿಪ್ಪೇಸ್ವಾಮಿಯವರ ಗದ್ದುಗೆಯಿದೆ. ಜಾತಿ–ಮತದ ಕಟ್ಟಳೆಗಳನ್ನೆಲ್ಲಾ ಹರಿದುಕೊಂಡಿರುವ ತಿಪ್ಪೇಸ್ವಾಮಿಯವರನ್ನು ಸಮಾಜದ ಎಲ್ಲ ಸಮುದಾಯದವರೂ ಸಮಾನವಾಗಿ ಆರಾಧಿಸುತ್ತಾರೆ. ದಕ್ಷಿಣ ಕರ್ನಾಟಕದ ಮಹದೇಶ್ವರ ಮತ್ತು ಮಂಟೇಸ್ವಾಮಿ ಅವರಂತೆ, ಗುರು ತಿಪ್ಪೇಸ್ವಾಮಿ ಅವರೂ ಕೂಡ ಜಾತಿ–ಮತಗಳನ್ನು ಮೀರಿದ ಸಂತರು. ತಿಪ್ಪೇಸ್ವಾಮಿ ಅವರಿಗೆ ಜನ್ಮ ನೀಡಿದ ಊರು, ತಂದೆ–ತಾಯಿ, ಕುಲ ಎಲ್ಲವೂ ಇಂದಿಗೂ ಅಕ್ಷರಶಃ ಅಗೋಚರವಾಗಿದೆ! ನಾಯಕನಹಟ್ಟಿಯಲ್ಲಿಯೇ ಅವರು ತಮ್ಮ ಇಹದ ಕಾಯಕವನ್ನು ಮುಗಿಸಿ, ಅಲ್ಲಿಯೇ ಕಾಯ ತೊರೆದರು. ಈಗಲೂ ನಾಯಕನಹಟ್ಟಿಯ ಹೊರಗಿನ ಮಠದಲ್ಲಿ ಅವರ ಗದ್ದುಗೆ ಇದೆ. ತಾನು, ತನ್ನದು ಎನ್ನುವುದೆಲ್ಲವನ್ನೂ ವಿಸರ್ಜಿಸಿಕೊಂಡು ಲೋಕದೊಂದಿಗೆ ಬಾಳುವುದು ಯೋಗಿಗಳ ಮೊದಲ ಲಕ್ಷಣ. ಎಲ್ಲ ಯೋಗಿಗಳೂ ಹೀಗೆಯೇ, ಅವರು ದೀವಟಿಗೆಯಂತೆ. ತಾವು ಮಾತ್ರ ಕತ್ತಲಲ್ಲೇ ಉಳಿದು, ಎಲ್ಲರಿಗೂ ಬೆಳಕು ನೀಡಿದ ನಿಜವಾದ ಸಂತರು.

ಕರ್ನಾಟಕದ ಮಧ್ಯಕಾಲೀನ ಅವಧಿಯಲ್ಲಿ ಬಾಳಿಬದುಕಿದ ನಾಯಕನಹಟ್ಟಿ ತಿಪ್ಪೇಸ್ವಾಮಿ ಜನರ ಕಷ್ಟ–ಸುಖಗಳೊಂದಿಗೆ ಬಾಳಿಬದುಕಿದ ನಿಜವಾದ ಸಂತ. ಜನರೇ ಸೃಷ್ಟಿಸಿರುವ ಹಲವಾರು ಪವಾಡಗಳ ನಡುವೆ ತಿಪ್ಪೇಸ್ವಾಮಿಯ ಬದುಕಿನ ವಿವರಗಳು ಮುಚ್ಚಿಹೋಗಿವೆ. ಸಾಧುಗಳಿಗೆ ಜಾತಿಯನ್ನು ಕೇಳಬೇಡಿ! ಜ್ಞಾನವನ್ನು ಕೇಳಿರಿ. ಖಡ್ಗದ ಬೆಲೆಯ ಬಗ್ಗೆ ವಿಚಾರಿಸಿರಿ, ಒರೆಯು ಒಂದು ಕಡೆ ಬಿದ್ದಿರಲಿ (ಕಬೀರ). ಸಂತರ ಇಂತಹ ನುಡಿಯನ್ನು ಹಿಂಬಾಲಿಸಿ ಹೋದರೆ, ಈ ಭಾಗದಲ್ಲಿ ಅವಧೂತ ತಿಪ್ಪೇಸ್ವಾಮಿ ಅವರು ಜನರಿಗಾಗಿ ಕಟ್ಟಿಸಿದ ಹಿರೇಕೆರೆ, ಚಿಕ್ಕಕೆರೆ, ರಾಮನಕೆರೆ, ಭೀಮನಕೆರೆ, ಹೊಸಕೆರೆ, ಕರಿಕೆರೆ ಮತ್ತು ನೀರಲಕೆರೆ ಕೆರೆಗಳಲ್ಲಿ ನಿಂತಿರುವ ನೀರು ಇಂದಿಗೂ ತಮಗೆ ಪ್ರಾಣ ನೀಡಿದ ತಮ್ಮ ಗುರುವಿನ ಹೆಸರನ್ನು ಹೇಳುತ್ತವೆ. ವೃಕ್ಷವೊಂದು ತನ್ನ ಹಣ್ಣುಗಳನ್ನು, ನದಿಯೊಂದು ತನ್ನ ನೀರನ್ನು ತನಗಾಗಿ ಎಂದೂ ಸಂಚಯಿಸಿಕೊಳ್ಳುವುದಿಲ್ಲ, ಎಲ್ಲವನ್ನೂ ಇತರರಿಗೇ ಕೊಡುತ್ತವೆ. ಗುರು ನಾಯಕನಹಟ್ಟಿ ತಿಪ್ಪೇಸ್ವಾಮಿ ಅವರ ಬದುಕು ಕೂಡ ಹೀಗೆಯೇ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಸಂತರ ಪರಂಪರೆಯಲ್ಲಿ ಯಾವ ಪಂಥದವರೋ ಖಚಿತವಾಗಿ ತಿಳಿದಿಲ್ಲ. ಆದರೆ ಒಂದಂತೂ ಸ್ಪಷ್ಟವಾಗುವುದು ಏನೆಂದರೆ, ಅವರು ವಚನಕಾರ ಸಿದ್ಧರಾಮನಂತೆ, ಕೆರೆಗಳನ್ನು ಕಟ್ಟಿಸಿದರೆಂದು ಸ್ಥಳೀಯ ಇತಿಹಾಸ ಹೇಳುತ್ತದೆ. ತಿಪ್ಪೇಸ್ವಾಮಿ ಅವರು ಕೆರೆ ಕಟ್ಟುವ ಕೆಲಸಗಾರರಿಗೆ, ಆ ದಿನದ ಕೆಲಸ ಮುಗಿದ ಮೇಲೆ ಅವರ ಮುಂದೆ ಮರಳಿನ ಗುಡ್ಡೆಯನ್ನು ಸುರಿದು, ಅದರ ಮೇಲೆ ತಮ್ಮ ನಾಗಬೆತ್ತವನ್ನು ಮುಟ್ಟಿಸಿ ಮಾಡಿದವರಿಗೆ ನೀಡು ಭಿಕ್ಷೆ ಎಂದು ಹೇಳುತ್ತಿದ್ದರಂತೆ! ಇದರಿಂದಾಗಿ ಕೆಲಸಗಾರರು ಆ ದಿನ ಮಾಡಿದ ಶ್ರಮಕ್ಕೆ ತಕ್ಕಂತೆ ಮರಳುಗುಡ್ಡೆಯಲ್ಲಿ ದುಡ್ಡು ದೊರೆಯುತ್ತಿತ್ತಂತೆ! ಎನ್ನುವ ಮಾತು ಈಗಲೂ ಈ ಭಾಗದಲ್ಲಿ ಪ್ರಚಲಿತದಲ್ಲಿದೆ. ಈ ರೂಪಕವು ಗುರು ತಿಪ್ಪೇಸ್ವಾಮಿ ಅವರಿಗೆ ಶ್ರಮ ಮತ್ತು ದುಡಿಮೆಯ ಬಗ್ಗೆ ಇದ್ದ ಆರೋಗ್ಯಕರ ನಿಲುವನ್ನು ಹೇಳುತ್ತದೆ. ವರ್ತಮಾನಕ್ಕೂ ಹೆಚ್ಚು ಪ್ರಸ್ತುತವಾಗಬಲ್ಲ ಈ ರೂಪಕವು ಕೇವಲ ಬಾಹ್ಯದಲ್ಲಿ ಸಂತರಾಗಿರುವ ಇಂದಿನ ಯೋಗಿಗಳಿಗೂ ಅನ್ವಯವಾಗುತ್ತದೆ. ಯೋಗಿಗಳ ಆಧ್ಯಾತ್ಮಿಕ ಬದುಕಿನ ಉದ್ದೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಮತ್ತು ಉತ್ತರ ಪಡೆದುಕೊಳ್ಳಲು ವಿಚಾರಪೂರ್ಣವಾದ ಚೌಕಟ್ಟನ್ನು ಈ ಘಟನೆಯು ಒದಗಿಸಬಹುದು.

ಭಾರತೀಯ ಸಿದ್ಧ ಪರಂಪರೆಯ ಹಿನ್ನೆಲೆಯಲ್ಲಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿ ಅವರು ಜಾತ್ಯತೀತ ಪರಂಪರೆಯ ಗುರು ಮಾರ್ಗದವರು. ಈ ಮಾರ್ಗದಲ್ಲಿ ಬಂದ ಅನೇಕ ತತ್ತ್ವಸಾಧಕರು ಮಧ್ಯಕಾಲೀನ ಕನ್ನಡದ ಸಾಧಕ ಪರಂಪರೆಯನ್ನು ಶ್ರೀಮಂತಗೊಳಿಸಿದರು. ಇವರಲ್ಲಿ ಅಚ್ಚ ಕನ್ನಡದಲ್ಲಿ ತತ್ತ್ವ ರಚನೆ ಮಾಡಿದ ಸಾಧಕರೂ ಇದ್ದಾರೆ. ಹಾಗೆಯೇ ತತ್ತ್ವ ರಚನೆ ಮಾಡದೆ, ತಮ್ಮ ಬದುಕನ್ನೇ ತತ್ತ್ವವನ್ನಾಗಿಸಿಕೊಂಡು ತಮ್ಮ ಸಾಮೀಪ್ಯಕ್ಕೆ ಬಂದವರಿಗೆ ಗುರುಮಾರ್ಗ ತೋರಿ ಬಾಳಿದ ಬಹುದೊಡ್ಡ ಸಾಧಕರೂ ಇದ್ದಾರೆ. ನಾಯಕನಹಟ್ಟಿ ತಿಪ್ಪೇಸ್ವಾಮಿ ಅವರೂ ಇದೇ ಬಗೆಯವರು. ತಾವು ಯಾವ ತತ್ತ್ವ ರಚನೆಯನ್ನೂ ಮಾಡದೆ, ಸಮಾಜ ಕೇಂದ್ರಿತ ಕಾರ್ಯಗಳನ್ನೇ ಅಧ್ಯಾತ್ಮದ ತತ್ತ್ವವನ್ನಾಗಿಸಿದರು. ಈ ಮೂಲಕ ನಿಜವಾದ ಅಧ್ಯಾತ್ಮದ ಗುರಿ ಜನತೆಯ ಕಲ್ಯಾಣ ಎಂಬುದನ್ನು ಮಾಡಿ ತೋರಿದರು. ಇದೇ ಅವರು ಮಾಡಿದ ನಿಜವಾದ ಪವಾಡ. ಗುರುಮಾರ್ಗದ ಪರಂಪರೆಯಲ್ಲಿ ಜ್ಞಾನ ಮತ್ತು ಕ್ರಿಯೆಗಳ ನಡುವೆ ವ್ಯತ್ಯಾಸವಿಲ್ಲ ಎನ್ನುವುದನ್ನು ಈ ಮಾರ್ಗದ ಸಾಧಕರು ಸಾಧಿಸಿ ತೋರಿಸಿದ್ದಾರೆ. ಇದರಿಂದಾಗಿಯೇ ಆ ಭಾಗದ ಮೌಖಿಕ ಸಾಹಿತ್ಯದಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಅವರನ್ನು ಕುರಿತು ಅಲ್ಲಿನ ಜನಪದರು ಪದ ಕಟ್ಟಿ ಹಾಡಿದ್ದಾರೆ. ತಮ್ಮೊಡನೆ ಬಾಳಿ ಬದುಕಿದ ಸಂತನಿಗೆ ನಮ್ಮ ಜನಪದರು ಅವರಿಗೆ ತೋರಿದ ಬಹುದೊಡ್ಡ ಗೌರವ ಇದು.

ನವಿಲು ಬಂದೈತವ್ವ ಒಂದು ನವಿಲು ಬಂದೈತೇ/ ತಿಪ್ಪೇಸ್ವಾಮಿ ಶಿಖರದ ಮೇಲೆ ಕುಳಿತು ಕೊಂಡೈತೆ/ ನವಿಲೂ ಕುಳಿತು ಕೊಂಡೈತೇ/ ಚಿಕ್ಕ ಕೆರೆಯ ಅಂಗಳದಲ್ಲಿ ಆಡುತ್ತೈತವ್ವ/ ಜೋಡುಕೆರೆಯ ಕಟ್ಟಿದ ಸಾರಿ ಹೇಳುತ್ತೈತೇ.

ತತ್ತ್ವ ಸಾಧಕರ ಗುರುಪರಂಪರೆಯಲ್ಲಿಯೂ ಕೂಡ ನಾಯಕನಹಟ್ಟಿ ತಿಪ್ಪೇಸ್ವಾಮಿ ಅವರಿಗೆ ದೊಡ್ಡ ಸ್ಥಾನವಿದೆ. ಅವರನ್ನು ಗುರುಸ್ಥಾನದಲ್ಲಿಟ್ಟು ಹಾಡಿದ ಹತ್ತಾರು ತತ್ತ್ವರಚನೆಗಳೂ ಕನ್ನಡದಲ್ಲಿ ಇವೆ. ನವಿಲು ಮತ್ತು ಕೆರೆಗಳನ್ನೇ ಕೇಂದ್ರವಾಗಿಟ್ಟುಕೊಂಡ ತತ್ತ್ವಪದಗಳು ಗುರು ತಿಪ್ಪೇಸ್ವಾಮಿ ಅವರ ಆಧ್ಯಾತ್ಮಿಕ ಸಾಧನೆಯನ್ನು ನವುರಾಗಿ ಕಟ್ಟಿಕೊಡುತ್ತವೆ.

ತಿಪ್ಪೇಸ್ವಾಮಿಯ ಜಾತ್ರೆಯನ್ನು ಸಮಾಜದ 12 ಆಯಗಾರರ ಕೋಮಿನವರು ಒಗ್ಗೂಡಿ ಜಾತ್ಯತೀತವಾಗಿ ನಾಯಕನಹಟ್ಟಿಯಲ್ಲಿ ಪ್ರತಿ ಫಾಲ್ಗುಣ ಮಾಸದಲ್ಲಿ ನಡೆಸುತ್ತಾರೆ. ಎಲ್ಲ ಸಮುದಾಯಗಳ ಸುಮಾರು 2 ಲಕ್ಷಕ್ಕೂ ಹೆಚ್ಚು ಜನ ಸೇರುವ ಈ ಜಾತ್ರೆ ಮಧ್ಯ ಕರ್ನಾಟಕದ ಸಾಮರಸ್ಯದ ಧಾರ್ಮಿಕ ಕೇಂದ್ರವಾಗಿ ಉಳಿದಿದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಭವಿಷ್ಯವನ್ನು ನಾವೇ ರೂಪಿಸಿಕೊಂಡರೂ, ಅದು ವಿಧಿ ಎಂದುಕೊಳ್ಳುವುದು ಮೂಢತನ.
  —ಬೆಂಜಮಿನ್ ಡಿಸ್ರೇಲಿ
- ಲೋಕದಲ್ಲಿ ಯಾವ ಮಾನವನೂ ಪೂರ್ಣ ಸುಖಿಯೂ ಅಲ್ಲ. ಪೂರ್ಣ ದುಃಖಿಯೂ ಅಲ್ಲ.
  —ಗೌತಮ ಬುದ್ಧ
- ಧರ್ಮದ ಇರುವಿಕೆಯಲ್ಲಿ ಮನುಷ್ಯ ಇಷ್ಟೊಂದು ದುಷ್ಟನಾಗಿರುವಾಗ, ಧರ್ಮವೇ ಇಲ್ಲದಿದ್ದರೆ ಅವನು ಏನಾಗಬಹುದಿತ್ತು?
  —ಬೆಂಜಮಿನ್ ಫ್ರಾಂಕ್ಲಿನ್
- ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.
  —ಪ. ಸೈರಸ್
- ಸಾಯುವುದು ಸುಲಭ, ಬಾಳುವುದು ದೊಡ್ಡ ಹೊಣೆಗಾರಿಕೆ.
  —ಎಸ್.ವಿ. ರಂಗಣ್ಣ
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.
  —ಸಿ.ವಿ. ರಾಮನ್
- ಸಂಪ್ರದಾಯದ ಬಾವಿಯಲ್ಲಿ ತೇಲುವುದು ಒಳ್ಳೆಯದು. ಅದರಲ್ಲಿ ಮುಳುಗುವುದು ಆತ್ಮಹತ್ಯೆ.
  —ಗಾಂಧೀಜಿ
- ವ್ಯಕ್ತಿತ್ವ ಸಾಧನೆ ಹೊಸ ಯುಗದ ಬೀಜಮಂತ್ರ.
  —ರಂ.ಶ್ರೀ. ಮುಗಳಿ
- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.
  —ಮೆಕಾಲೆ